ಅಸಲು ದಾವಾ ನಂ.57/2024
ಪಿ ಡಬ್ಲ್ಯು-1

ದಿನಾಂಕಃ 17-10-2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀಸವಾಲುಃ- ಪ್ರತಿವಾದಿ ನಂ.3 ಪರ ಶ್ರೀ. ವಿ ಬಿ ಟಿ ವಕೀಲರಿಂದ.**

ನನ್ನ ತಂದೆ ಮೋದಿನಸಾಬ ಇವರಿಗೆ ನಾನು, ಪ್ರತಿವಾದಿ ನಂ.1 ರಿಂದ 3 ಮಕ್ಕಳು ಎಂದರೆ ಸರಿ. ನಮಗೆ ಒಟ್ಟು ಕುಟುಂಬದ ಜಮೀನಿನ ಆದಾಯ ಬಿಟ್ಟು ಬೇರೆ ಆದಾಯ ಇಲ್ಲ ಎಂದರೆ ಸರಿ. ಒಟ್ಟು ಕುಟುಂಬದ ಆದಾಯದಿಂದ ಸರ್ವೇ ನಂ.489/4, 289/2, 442, 281/16 ಹಾಗೂ 281/4 ನೇದ್ದವುಗಳನ್ನು ಖರೀದಿ ಹಿಡಿಯಲಾಗಿರುತ್ತದೆ ಎಂದರೆ ಸರಿ. ಅದೇ ರೀತಿ ಪುರಸಭೆ ಆಸ್ತಿ ನಂ.50, 50/1 ನೇದ್ದನ್ನು ಸಹ ಖರೀದಿ ಹಿಡಿಯಲಾಗಿರುತ್ತದೆ ಎಂದರೆ ಸರಿ. ಸದರಿ ಜಮೀನುಗಳನ್ನು ದಾವಾ ಆಸ್ತಿ ನಂ.289/1 ಹಾಗೂ 471/2 ಎ+2 ಬಿ ಆಸ್ತಿಗಳಿಂದ ಬಂದ ಆದಾಯದ ಮೇರೆಗೆ ಖರೀದಿ ಹಿಡಿಯಲಾಗಿರುತ್ತದೆ ಎಂದರೆ ಸರಿ. ನನ್ನ ಮತ್ತು ಪ್ರತಿವಾದಿಯರ ಮಧ್ಯೆ ಇಲ್ಲಿಯವರೆಗೂ ಯಾವುದೇ ಪಾಲು ವಿಭಾಗ ಆಗಿಲ್ಲ ಎಂದರೆ ಸರಿ. ಆದ್ದರಿಂದ ದಾವಾದ ಆಸ್ತಿಗಳನ್ನು ನಾನು ಮತ್ತು ಪ್ರತಿವಾದಿಯರು ಸಾಮೂಹಿಕವಾಗಿ ಸಾಗುವಳಿ ಮಾಡುತ್ತಾ ಬಂದಿರುತ್ತವೆ ಎಂದರೆ ಸರಿ. 3 ನೇ ಪ್ರತಿವಾದಿಗೆ ದಾವಾ ಆಸ್ತಿಗಳ ಸಂಬಂಧ ಪಾಲು ಅಂತಾ ಹಣ ಇಲ್ಲವೇ ಬಂಗಾರ ಕೊಟ್ಟಿಲ್ಲ ಎಂದರೆ ಸರಿ. ಆದ್ದರಿಂದ 3 ನೇ ಪ್ರತಿವಾದಿಗೂ ಸಹ ದಾವಾ ಆಸ್ತಿಗಳಲ್ಲಿ ಪಾಲು ಇರುತ್ತದೆ ಎಂದರೆ ಸರಿ.

ಪಾಟೀಸವಾಲುಃ 1 ನೇ ಪ್ರತಿವಾದಿ ಪರ ಶ್ರೀ. ಎಮ್ ಆರ್ ಬಿ ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ.ಹೆ.ಕೆ.ಸರಿ.ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು
ಜೆ ಎಮ್ ಎಫ್ ಸಿ, ಶಿಗ್ಗಾಂವ.
(ಸ್ಥಳಃ ಸವಣೂರ).